ಮೇಲಿಂದ ಹನಿಗಳು ಕೆಳಗೆ ಜಾರುತ್ತಿದ್ದವು. ಬೆಳದಿಂಗಳ ಬೆಳಕಿನಲ್ಲಿ ಆತನ ಮುಖ ತುಂಬ ಸುಂದರವಾಗಿ ತೋರುತ್ತಿತ್ತು. ಅದನ್ನು ಕಂಡು ಸ್ವಾಲೋ ಹಕ್ಕಿಯ ಹೃದಯದಲ್ಲಿ ಕನಿಕರ ತುಂಬಿಕೊಂಡಿತು.

'ಯಾರು ನೀನು?' ಸ್ವಾಲೋ ಕೇಳಿತು.

'ನಾನು ಸುಖಿ ರಾಜಕುಮಾರ.'

'ಹಾಗಾದರೆ ಅಳುವೆ ಏಕೆ? ನೀನೀಗ ಸಾಕಷ್ಟು ನನ್ನನ್ನು ತೋಯಿಸಿ ಬಿಟ್ಟಿರುವೆ' ಎಂದಿತು ಸ್ವಾಲೋ.

'ನಾನು ಜೀವಂತವಾಗಿದ್ದಾಗ ನನ್ನೊಳಗೆ ಮನುಷ್ಯನ ಹೃದಯವಿತ್ತು. ಕಣ್ಣೀರೆಂದರೇನು ಎಂಬುದೇ ನನಗೆ ಗೊತ್ತಿರಲಿಲ್ಲ. ಚಿಂತೆ ಮುಕ್ತವಾದ ಅರಮನೆಯೊಳಗೆ ನಾನು ವಾಸವಾಗಿದ್ದೆ. ಅಲ್ಲಿ ದುಃಖಕ್ಕೆ ಪ್ರವೇಶವಿರಲಿಲ್ಲ. ಹಗಲು ಹೊತ್ತು ನಾನು ನನ್ನ ಜೊತೆಗಾರರ ಕೂಡ ಹೂದೋಟದಲ್ಲಿ ಆಟವಾಡುತ್ತಿದ್ದೆ. ಪ್ರತಿಸಂಜೆ ಸಭಾಭವನದೊಳಗೆ ನಾನು ನೃತ್ಯಕೂಟದ ನೇತೃತ್ವ ವಹಿಸುತ್ತಿದ್ದೆ. ಆ ಹೂದೋಟದ ಸುತ್ತಲೂ ಎತ್ತರವಾದ ಗೋಡೆ ಇತ್ತು. ಅದರಾಚೆ ಏನಿದೆ ಎಂದು ಕೇಳುವ ಗೋಜಿಗೇ ಹೋಗುತ್ತಿರಲಿಲ್ಲ. ನನ್ನ ಸುತ್ತಲಿದ್ದುದೆಲ್ಲ ಸುಂದರವಾಗಿತ್ತು. ನನ್ನ ಆಸ್ಥಾನದಲ್ಲಿದ್ದವರು ನನ್ನನ್ನು ಸುಖಿ ರಾಜಕುಮಾರ ಎಂದೇ ಸಂಬೋಧಿಸುತ್ತಿದ್ದರು. ಭೋಗ ವಿಲಾಸವನ್ನೇ ಸುಖ ಎನ್ನುವುದಾದರೆ ನಾನು ತುಂಬ ಸುಖಿಯಾಗಿದ್ದೆ. ಹಾಗೆ ಸುಖವಾಗಿ ಬದುಕಿ ಸುಖದಿಂದಲೇ ಸಾವನ್ನಪ್ಪಿದೆ. ಸತ್ತನಂತರ ಎತ್ತರವಾದ ಈ ಸ್ತಂಭದ ಮೇಲೆ ನನ್ನ ಪ್ರತಿಮೆ ನಿಲ್ಲಿಸಿದ್ದರಿಂದ, ನಾನೀಗ ನನ್ನ ನಗರದ ವಿಕೃತ ರೂಪವನ್ನು ಹಾಗೂ ಬಡತನದ ಕರಾಳ ಮುಖವನ್ನು ಕಾಣುವಂತಾಗಿದೆ. ನನ್ನ ಹೃದಯವನ್ನು ಉಕ್ಕಿನಿಂದ ಮಾಡಲಾಗಿದೆಯಾದರೂ ಅಳುವುದನ್ನು ಬಿಟ್ಟು ನನಗೆ ಬೇರೆ ಗತಿಯಿಲ್ಲದಂತಾಗಿದೆ.

'ಅಂದರೆ ಆತನ ಇಡೀ ದೇಹ ಬಂಗಾರದ್ದಲ್ಲವೆ?' ಸ್ವಾಲೋ ಮನಸ್ಸಿನಲ್ಲೇ ಅಂದುಕೊಂಡಿತು. ಬೇರೆಯವರ ವೈಯಕ್ತಿಕ ವಿಷಯಗಳ ಬಗ್ಗೆ ಅದು ಎಂದೂ ದನಿ ಎತ್ತುತ್ತಿರಲಿಲ್ಲ. ನಿಜಕ್ಕೂ ಸ್ವಾಲೋ ಸುಶೀಲಗುಣಸಂಪನ್ನವಾಗಿತ್ತು.

'ಅದೋ ಅಲ್ಲಿ ದೂರದ ಒಂದು ಚಿಕ್ಕ ಓಣಿಯಲ್ಲಿ ಓರ್ವ ಬಡವನ ಮನೆ ಇದೆ' ಎಂದು ಆ ರಾಜಕುಮಾರನ ಪ್ರತಿಮೆ ತಗ್ಗಿದ ದನಿಯಲ್ಲಿ ರಾಗವಾಗಿ ಮಾತು ಮುಂದುವರೆಸಿತು. 'ಅಲ್ಲಿ ಓರ್ವ ಮಹಿಳೆ ಒಂದು ಮೇಜಿನ ಮೇಲೆ ಕುಳಿತದ್ದು ಆ ಮನೆಯ ತೆರೆದ ಕಿಟಕಿಯ ಮೂಲಕ ನನಗೆ ಕಾಣುತ್ತಿದೆ. ಅವಳ ಮುಖ ಬಾಡಿದೆ ಹಾಗೂ ವಿಷಣ್ಣವಾಗಿದೆ. ವೃತ್ತಿಯಿಂದ ಆಕೆ ಹೊಲಿಗೆ ಕೆಲಸದವಳು. ಸೂಜಿ ಚುಚ್ಚಿ ಚುಚ್ಚಿ ಆಕೆಯ ಕೆಂಪು ಬೆರಳುಗಳು ಒರಟಾಗಿವೆ. ದರ್ಬಾರಿನಲ್ಲಿ ಜರುಗಲಿರುವ ನೃತ್ಯಕೂಟಕ್ಕಾಗಿ ಓರ್ವ ಅತ್ಯಂತ ಸುಂದರ ಯುವತಿಯ ಉಡುಪಿನ ಮೇಲೆ ಚೆಂದದ ಹೂಗಳ ಕಸೂತಿ ಹಾಕುವುದರಲ್ಲಿ ಆಕೆ ಮಗ್ನಳಾಗಿದ್ದಾಳೆ. ಆ ಮಹಿಳೆ ರಾಣಿಯ ಗೌರವಕ್ಕೆ ಪಾತ್ರಳಾದವಳು. ಅದಕ್ಕಾಗಿ ಆಕೆ ವಿಶೇಷ ಕಾಳಜಿಯಿಂದ ಆ ಉಡುಪು ಸಿದ್ಧಪಡಿಸುತ್ತಿದ್ದಾಳೆ. ಆ ಕೋಣೆಯ ಮೂಲೆಯಲ್ಲಿ ಆಕೆಯ ಮಗ ಅನಾರೋಗ್ಯದಿಂದ ಹಾಸಿಗೆಯ ಮೇಲೆ ಮಲಗಿದ್ದಾನೆ. ಅವನು ಜ್ವರದಿಂದ ಬಳಲುತ್ತಿದ್ದು ತಿನ್ನಲು ಕಿತ್ತಳೆ ಹಣ್ಣುಗಳನ್ನು ಬೇಡುತ್ತಿದ್ದಾನೆ. ಆತನಿಗೆ ಕೊಡಲು ನದಿ ನೀರಿನ ಹೊರತು ಆ ತಾಯಿಯ ಬಳಿ ಏನೂ ಇಲ್ಲ. ಅದಕ್ಕಾಗಿ ಆತ ರೋದಿಸುತ್ತಿದ್ದಾನೆ. ಸ್ವಾಲೋ, ಸ್ವಾಲೋ, ಪುಟ್ಟ ಸ್ವಾಲೋ, ನನ್ನ ಖಡ್ಗದ ಹಿಡಿಕೆಯ ಮೇಲಿರುವ ಮಾಣಿಕ್ಯವನ್ನು ಕಿತ್ತುಕೊಂಡು ಅವಳಿಗೆ ಒಯ್ದು ಕೊಡು. ಏಕೆಂದರೆ